( ಸಾಕ್ಷಿಯನ್ನು ದಿಃ 24-09-2021 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)

ಪಾಟೀ ಸವಾಲು ಶ್ರೀ ಎಂ ಎನ್ ಆರ್ ವಕೀಲರಿಂದಃ

ದ್ಯಾವಮ್ಮ ಮತ್ತು ಇತರರು ನನ್ನ ಮತ್ತು ಇತರರ ವಿರುದ್ಧ ಅಸಲು ದಾವಾ ಸಂಖ್ಯೆ 283/2012 ರಂತೆ ಹಕ್ಕು ಘೋಷಣಾ ಮತ್ತು ಶಾಶ್ವತ ನಿರ್ಬಂಧಕಾಜ್ಞೆ ಪರಿಹಾರ ಕೋರಿ ದಾವೆ ಮಾಡಿದ್ದಾರೆ ಎಂದರೆ ನನಗೆ ಯಾವುದೇ ಮಾಹಿತಿ ಇಲ್ಲ. ನಾನು ಸದರಿ ಮೇಲೆ ಹೇಳಿದ ದಾವೆಯಲ್ಲಿ 2 ನೇ ಪ್ರತಿವಾದಿಯನ್ನಾಗಿ ಮಾಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಾನು ಸದರಿ ದಾವೆಯಲ್ಲಿ ನನ್ನ ಪರ ಲಿಖಿತ ಹೇಳಿಕೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಯನ್ನು ಹೊರತುಪಡಿಸಿ ಬೇರೆ ಯಾವುದೇ ಆಸ್ತಿಯನ್ನು ಕ್ರಯಕ್ಕೆ ಪಡೆದಿಲ್ಲ. ದಾವಾ ಆಸ್ತಿಯಲ್ಲಿ ನನ್ನ ಚಿಕ್ಕಪ್ಪನ ಮಕ್ಕಳಿಗೆ ಹಿಸ್ಸೆ ಬಂದಿದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ನನ್ನ ತಂದೆ ಮತ್ತು ಅವರ ತಮ್ಮಂದಿರಾದ ಗುಳ್ಳೇಗೌಡ ಮತ್ತು ಪಾಪೇಗೌಡ ದಾವಾ ಆಸ್ತಿಯನ್ನು ಒಟ್ಟಾಗಿ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ , ಸಾಕ್ಷಿ ಸ್ವತಃ ನುಡಿಯುತ್ತಾರೆ ನಮ್ಮ ತಂದೆ ಒಬ್ಬನೇ ಮಗನಾಗಿದ್ದು ಅವರಿಗೆ ತಮ್ಮಂದಿರು ಇರುವುದಿಲ್ಲ.

ಈ ಸಮಯ ಶ್ರೀ ಎಂ.ಎನ್.ಆರ್ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಯಾವುದೇ ಸಕಾರಣವಿಲ್ಲದ ಕಾರಣ ಸದರಿಯವರ ಪ್ರಾರ್ಥನೆಯನ್ನು ತಿರಸ್ಕರಿಸಿ ಮುಂದುವರೆದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಪಾಟೀ ಸವಾಲು ಃ 1 ಮತ್ತು 2 3 ನೇ ಪ್ರತಿವಾದಿಗಳು ಮತ್ತು ಅವರ ಪರ ವಕೀಲರನ್ನು ಗೈರುಹಾಜರು, ಆ ಕಾರಣ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇದೆ.

ಸಿವಿಲ್ ನ್ಯಾಯಾಧೀಶರು, ಅರಕಲಗೂಡು.

ಜೆ.ಎಂ.ಎಫ್.ಸಿ. ಅರಕಲಗೂಡು.